# ಜಾನಪದ ಸಾಹಿತ್ಯ ಮತ್ತು ಆಧುನಿಕತೆಯ ಪ್ರಭಾವ


## ಲಕ್ಷ್ಮೀ ಎಲ್. ಪೂಜಾರಿ

ಕನ್ನಡ ಉಪನ್ಯಾಸಕಿ, ಎಸ್.ಎಸ್.ಎಮ್.ಎಸ್. ಕಾಲೇಜು, ಅಥಣಿ.


DOI: https://doi.org/10.5281/zenodo.17255159


## ABSTRACT:

ಜಾನಪದ ಸಾಹಿತ್ಯವು ತಲೆತಲೆಮಾರುಗಳಿಂದ ಬೆಳೆದು ಬಂದಿರುವ ಸಾಂಸ್ಕೃತಿಕ ಸಂಪ್ರದಾಯವಾಗಿದ್ದು, ಇದು ಸಮಾಜದ ಜನಪದ ಸಂಸ್ಕೃತಿಯ ಒಂದು ಭಾಗ. ಜನರ ಪದವೇ ಜಾನಪದ. ಜನಪದ ಆಕಾಶದಷ್ಟು ಆಳ. ಅದರಲ್ಲಿ ಹಲವು ಪ್ರಕಾರಗಳಿವೆ. ಗಾದೆ, ಒಡಪು, ಒಗಟು ಹೀಗೆ. ವಿಶಿಷ್ಟ ಸಾಹಿತ್ಯವಾದ ಜನಪದ ಸಾಹಿತ್ಯವನ್ನು ಬಿ.ಎಂ.ಶ್ರೀ. 'ಜನವಾಣಿ ಬೇರು ಕವಿವಾಣಿ ಹೂವು' ಎಂದು ಕರೆದಿದ್ದಾರೆ. 'ಜಾನಪದ ಎಂದರೆ ಹಳ್ಳಿ, ಹಳ್ಳಿ ಎಂದರೆ ಜಾನಪದ' ಎನ್ನುವಷ್ಟರ ಮಟ್ಟಿಗೆ ಹುದುಗಿ ಹೋಗಿರುವ ಜಾನಪದ ಹಳ್ಳಿಗರ ಒಂದು ವಿಶಿಷ್ಟ ಸಾಂಸ್ಕೃತಿಕ ರೂಪ. ನಗರೀಕರಣದ ಪ್ರಭಾವ ಕೂಡ ಸಾಕಷ್ಟು ಬೀರಿದೆ. ನಗರಗಳ ಬೆಳವಣಿಗೆಯಿಂದ ಹಳ್ಳಿಗಳಲ್ಲಿ ಜನರು ಉದ್ಯೋಗ ಅರಸಿ ನಗರಕ್ಕೆ ಹೋಗುವುದರಿಂದ ಹಳ್ಳಿಗಳಲ್ಲಿ ನಗರೀಕರಣದ ಪ್ರಭಾವ ಪ್ರಾರಂಭವಾಯಿತು. 200 ವರ್ಷಗಳ ಕಾಲ ಆಳ್ವಿಕೆ ಮಾಡಿದಂತಹ ಬ್ರಿಟಿಷರಿಗಿಂತ 20 ವರ್ಷಗಳಲ್ಲಿ ಆಗಿರುವ ಪ್ರಭಾವ ಎಂತಹದು ಎನ್ನುವುದನ್ನು ಗುರುತಿಸಬಹುದು. ಜನಪದರು ಆಧುನಿಕತೆಯ ಪ್ರಭಾವದಿಂದ ಆಧುನಿಕ ಮಾಧ್ಯಮಗಳಾದ ಟಿ.ವಿ., ಮೊಬೈಲ್, ಗಣಕಯಂತ್ರಗಳ ಬಳಕೆಯಿಂದ ಹಿಂದಿನಿಂದಲೂ ಬಂದಂತಹ ಹಾಡುಕುಣಿತಗಳು ಇಂದು ಕಾಣದ ಹಾಗೆ ಆಗಿವೆ. ಜನಪದರು ಮನರಂಜನೆಯನ್ನು ತಮ್ಮ ಬದುಕಿನ ಅನುಭವಗಳ ಮೂಲಕ ಪಡೆಯುತ್ತಿದ್ದರು. ಈಗ ಮಾಧ್ಯಮಗಳ ಪ್ರಭಾವದಿಂದ ಅದು ಕಣ್ಮರೆಯಾಗುತ್ತಿದೆ. ಜಾನಪದ ಜನರ ಪದವಾಗಿತ್ತು. ಜನಪದರು ತಾವು ಅನುಭವಿಸಿದ ಅನುಭವಗಳನ್ನು ಹಾಡು, ನೃತ್ಯ, ಕುಣಿತ, ಆಟಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಇವುಗಳೇ ಅವರಿಗೆ ಮನರಂಜನೆಯಾಗಿತ್ತು. ಯಾವುದೇ ಮಾಧ್ಯಮಗಳಿರಲಿಲ್ಲ. ತಾವೇ ಈ ರೀತಿಯಾಗಿ ಖುಷಿ ಪಡುತ್ತಾ ಕಾಲ ಕಳೆಯುತ್ತಿದ್ದರು.



## KEYWORDS:

ಜನಪದ, ಜಾನಪದ, ಆಧುನಿಕತೆ, ಬದುಕು, ಸಂಸ್ಕೃತಿ, ಜನವಾಣಿ, ಒಗಟು, ಒಡಪು, ಬೇರು.

ಜನಪದ ಸಾಹಿತ್ಯವು ಮೌಖಿಕ ಸಾಹಿತ್ಯವಾಗಿದ್ದು, ಕಂಠಸ್ಥ ಸಾಹಿತ್ಯವಾಗಿದೆ. ಆಧುನಿಕತೆಯ ಪ್ರಭಾವದಿಂದ ಜನಪದ ಸಾಹಿತ್ಯಕ್ಕೆ ಸಾಕಷ್ಟು ತೊಂದರೆ ಉಂಟಾಗುತ್ತಿರುವುದನ್ನು ಕಾಣಬಹುದು. ಇದರ ಪ್ರಭಾವದಿಂದ ಸಾಕಷ್ಟು ಬದಲಾವಣೆ ಕಂಡು ಬಂದಿದೆ. ಬದಲಾವಣೆ ಸಹಜವಾದರೂ, ಬದಲಾವಣೆ ಒಂದನ್ನು ನುಂಗಿ ಹಾಕಿ ಇನ್ನೊಂದು ಚಲಾವಣೆಗೆ ತರುವುದು ಯಾವ ನ್ಯಾಯ? ಆಧುನಿಕತೆ ಅಬ್ಬರಕ್ಕೆ ಜನಪದ ತತ್ತರಿಸುತ್ತಿದೆ. ಜನಪದರು ದೇಶೀಯ ವಸ್ತುಗಳು ಮತ್ತು ದೇಶೀಯತೆಗೆ ಬೆಲೆ ಕೊಡುತ್ತಿದ್ದರು. ಆರೋಗ್ಯವಾದ ಬದುಕನ್ನು ಬದುಕುತ್ತಿದ್ದರು. ಪಾಶ್ಚಾತ್ಯೀಕರಣದಿಂದ ನಾವು ಜೀವನಶೈಲಿ ಬದಲಾವಣೆ ಮಾಡಿಕೊಳ್ಳುತ್ತಾ ರೋಗಗಳಿಗೆ ತುತ್ತಾಗುತ್ತಿದ್ದೇವೆ. ಜಾನಪದ ದೇಶೀಯತೆಯ ಸೊಗಡು. ಅದಕ್ಕೆ ಲಿಖಿತ ರೂಪವಿಲ್ಲದಿದ್ದರೂ, ಸಾವಿರಾರು ವರ್ಷಗಳಿಂದ ನಮಗೆ ಮೌಖಿಕ ರೂಪದಲ್ಲಿ ಜೀವಂತ ಸಾಕ್ಷಿಯಾಗಿ ನಿಂತಿದೆ. ಆದರೆ ಇದನ್ನು ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಲಿಖಿತ ರೂಪಕ್ಕೆ ತರುವುದು ಒಂದು ಒಳ್ಳೆಯ ಉದ್ದೇಶವಾದರೂ, ವಿಡಿಯೋ ಮತ್ತು ಆಡಿಯೋಗಳ ರೂಪದ ಪ್ರಭಾವದಿಂದ ತನ್ನ ಸ್ವಂತಿಕೆಯನ್ನು ಮತ್ತು ಸತ್ವವನ್ನು ಕಳೆದುಕೊಂಡಿರುವುದು ಅಕ್ಷರಶಃ ಸತ್ಯ. ಜನಪದ ಆಚರಣೆಗಳು ಅವರ ಬದುಕಿನ ಒಂದು ರೂಪವಾಗಿವೆ. ಅವರ ನಂಬಿಕೆಗಳು ಬದುಕಿನ ಅಂಗಗಳು. ಇಂದಿಗೆ ಕೇವಲ ಆಚರಣೆಗಳಾಗಿವೆ ಹೊರತು ಅವುಗಳಲ್ಲಿ ನಂಬಿಕೆ ಹೊರಟುಹೋಗಿದೆ. ಬದುಕಿನಲ್ಲಿ ನಡೆಯುವ ಘಟನೆಗಳನ್ನು ನಾವು ಇಲ್ಲಿ ಸಾಕ್ಷಿಕರಿಸಬಹುದು. ನಾವು ಎಷ್ಟೇ ಆಧುನಿಕತೆಯನ್ನು ಬೆನ್ನು ಹತ್ತಿ ಹೊಸದನ್ನು ಮಾಡಲು ಹೋರಾಡಿದರೂ, ಅದರ ಮೂಲ ಜಾನಪದವಾಗಿರುತ್ತದೆ. ಆಧುನಿಕತೆಯಿಂದ ಬದಲಾವಣೆಯಾದರೂ ಅದರಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವಾಗಿಲ್ಲ. ಜನಪದರು ಮುಂದಿನ ಜನಾಂಗಕ್ಕೆ ತಮ್ಮ ಸಾಹಿತ್ಯವನ್ನು ಬಳುವಳಿಯಾಗಿ ನೀಡಿದ್ದರು.

**“ಅತ್ತೆ ಮಾವರ ಪಾದ ಮತ್ತೆ ಗುರುವಿನ ಪಾದ**
**ಸ್ವಾಮಿ ಚಲುವಯ್ಯ ಶ್ರೀಪಾದ ನೆನೆದರೆ**
**ಒಂದೋಟು ಪಾಪ ಪರಿಹಾರ”**[1]

ಹಿಂದಿನ ಕಾಲದ ಕುಟುಂಬದ ಚಿತ್ರಣವನ್ನು ಈ ಪದ್ಯದಲ್ಲಿ ಗುರುತಿಸಬಹುದು. ಇಲ್ಲಿ ಸೊಸೆಯಾದವಳಿಗೆ ದೇವರಿಗಿಂತ ಗುರು ಹೆಚ್ಚು, ಗುರುವಿಗಿಂತ ಅತ್ತೆಮಾವರು ಹೆಚ್ಚು ಎನ್ನುವ ಭಾವನೆ ಇಲ್ಲಿದೆ. ಅತ್ತೆಮಾವಂದಿರ ಸೇವೆಯಿಂದ ಅವಳಿಗೆ ಎಲ್ಲಾ ಭಾಗ್ಯಗಳು ಲಭಿಸುತ್ತದೆ. ಹೆಣ್ಣು ಮಕ್ಕಳು ಹತ್ತಿರವಿಲ್ಲದಿರುವಾಗ ಮುಪ್ಪಿನಲ್ಲಿ ಅವರ ಯೋಗಕ್ಷೇಮವನ್ನು ಸೊಸೆ ನೋಡಿಕೊಳ್ಳಬೇಕಾಗುತ್ತದೆ. ಆದರೆ ಈಗ ಬರಬರುತ್ತಾ ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಇಂದಿನ ಬದುಕಿನ ಶೈಲಿ ಬದಲಾವಣೆ ಹೊಂದಿರುವ ಹಾಗೆ ಸಂಬಂಧಗಳ ಬೆಲೆ ಕಡಿಮೆಯಾಗುತ್ತಿವೆ. ನಾಗರಿಕತೆಯ ಬೆಳವಣಿಗೆಗೆ

ಬೆಂಕಿಯಂತೂ ಮೂಲ ಕಾರಣವಾಯಿತೋ ಅಂತೆಯೇ ಕೃಷಿ ಸಾಧನೆ ಮಹಾಪ್ರೇರಕ ಶಕ್ತಿಯಾಗಿತ್ತು. ಪ್ರಾಣಿಗಳ ಹಾಗೆ ಬದುಕುತ್ತಿದ್ದ ಮಾನವ ವ್ಯವಸ್ಥಿತವಾಗಿ ಬದುಕಲು ಕಲಿತು ವಾಸಿಸಲು ಪ್ರಾರಂಭ ಮಾಡಿದನು.

“ಮಾನವನ ಜೀವನದಲ್ಲಿ ಜನನದಿಂದ ಮರಣದವರೆಗೆ ಅನೇಕ ಘಟನೆಗಳು ಸಂಭವಿಸುತ್ತಿವೆ. ಅವುಗಳಲ್ಲಿ ಮದುವೆ, ಗರ್ಭಧಾರಣೆ, ಜನನ, ಬೆಳವಣಿಗೆ, ಮುಪ್ಪು, ಸಾವು ಇವೇ ಮೊದಲಾದ ಬಹುಮುಖ್ಯ ಘಟನೆಗಳು. ಇವು ಬೇಟೆ, ಬೇಸಾಯ, ನೇಯ್ಗೆಯಷ್ಟೇ ಪ್ರಶಸ್ತವಾದ ಸಂಗತಿಗಳು. ಇವುಗಳನ್ನು ಕುರಿತು ಹಾಡುಗಳು ಅಸಂಖ್ಯಾತವಾಗಿವೆ.”[2]

ಪಾಶ್ಚಾತ್ಯ ಪ್ರಭಾವದಿಂದಾಗಿ ಇಲ್ಲಿಯ ಕುಟುಂಬ ವ್ಯವಸ್ಥೆ ಶಿಥಿಲಗೊಳ್ಳುತ್ತಿದೆ. ಅದರ ಬಗ್ಗೆ ಹಿಂದಿನ ಪ್ರಭಾವ ಲುಪ್ತವಾಗಿದೆ. ತಂದೆ ಸಂಜೆ ಮನೆಗೆ ಬರುವ ಹೊತ್ತಿಗೆ ಮಕ್ಕಳು ಮಲಗಿರುವುದರಿಂದ, ಅವರು ಬೆಳಿಗ್ಗೆ ಮನೆ ಬಿಡುವ ಹೊತ್ತಿಗೆ ಅವರು ಮಲಗಿರುವುದರಿಂದ ಅಷ್ಟೇ ಅಲ್ಲ, ವಿದ್ಯಾರ್ಥಿನಿಲಯದಲ್ಲಿ ಇಟ್ಟಿರುವುದರಿಂದ ತಂದೆಮಕ್ಕಳ ಬಾಂಧವ್ಯ ಬಿರುಕು ಬಿಡುತ್ತದೆ. ಗಂಡಹೆಂಡತಿ ಕುಳಿತು ಮಾತನಾಡುವ ವ್ಯವಧಾನವಿಲ್ಲ. ನಾಗರಿಕತೆಯ ವೈಪರೀತ್ಯದಿಂದಾಗಿ ಆದಿಮಾನವ ಬದುಕಿನ ಸ್ವರೂಪ ಮತ್ತು ಮೌಲ್ಯಗಳನ್ನು ಕಳೆದುಕೊಂಡಿದ್ದಾನೆ. ಗ್ರಾಮೀಣ ಬದುಕಿನ ಮೌಲ್ಯಗಳು ಕುಟುಂಬಗಳಲ್ಲಿ ಉಳಿದಿಲ್ಲ. ಸಂಸಾರಗಳು ಬರ ಬರುತ್ತಾ ನೆಮ್ಮದಿಯನ್ನು ಕಳೆದುಕೊಳ್ಳುತ್ತಿವೆ. ಗಂಡಹೆಂಡತಿಯರಿಬ್ಬರು ಕೆಲಸದ ಭರದಲ್ಲಿ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಯಾಂತ್ರಿಕವಾದ ಬದುಕನ್ನು ಸಾಗಿಸುತ್ತಿದ್ದಾರೆ. ಕೇವಲ ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಹಿರಿಯರ ಮಾರ್ಗದರ್ಶನವಿಲ್ಲದೆ ಜಗಳಗಳು ಹೆಚ್ಚಾಗಿ ಇಬ್ಬರ ನಡುವಿನ ಸಾಮರಸ್ಯ ಇಲ್ಲವಾಗಿದೆ. ಧರ್ಮ ಅಥವಾ ಕಾನೂನು ಶಾಸ್ತ್ರಗಳಿಗೆ ಮೂಲ ಆಕಾರವೇ ಜಾನಪದ. ಇತ್ತೀಚಿನ ತನಕ ಕೋರ್ಟುಗಳಾಗಲಿ, ಪಂಚಾಯಿತಿಗಳಾಗಲಿ ಜಾನಪದ ನಂಬಿಕೆಗಳನ್ನು ಆಧರಿಸಿವೆ. ನ್ಯಾಯ ತೀರ್ಮಾನಕ್ಕೆ ಕೋರ್ಟು ಮತ್ತು ಕಚೇರಿಗಳಿರಲಿಲ್ಲ.

“ಆಧುನಿಕತೆಯ ಪರಿಣಾಮವಾಗಿ ಕೋರ್ಟು ಮತ್ತು ಕಚೇರಿಗಳು ಅಸ್ತಿತ್ವಕ್ಕೆ ಬರುವ ಮುನ್ನ ಸಂಪ್ರದಾಯಗಳು ಕಾನೂನುಗಳಂತೆ ವರ್ತಿಸುತ್ತಿದ್ದವು. ಅವು ಅಲಿಖಿತ ಶಾಸನಗಳು ಹೌದು. ಕುಟುಂಬ ಮತ್ತು ಸಮಾಜಗಳ ನಾನಾವಿಧ ಸಂಬಂಧ ವ್ಯವಹಾರಗಳನ್ನು ನಿಯಂತ್ರಿಸುತ್ತಿದ್ದವು. ಸಮಾಜದ ಮುಖಂಡನಾಗಲಿ ನಾಡಿನ ದೊರೆಯಾಗಲಿ ಅವನ್ನು ಮಾನ್ಯ ಮಾಡಬೇಕಾಗಿತ್ತು. ಸಮಾಜದ ಕಟ್ಟುಪಾಡುಗಳು ನೀತಿ ಸೂತ್ರಗಳಾದವು”[3]

ಆಧುನಿಕ ಸಮಾಜಕ್ಕಿಂತ ಆದಿಮಾನವ ಸಮಾಜದಲ್ಲಿ, ನಾಗರಿಕ

ಜನಾಂಗಗಳಿಗಿಂತ ಬುಡಕಟ್ಟು ಜನರಲ್ಲಿ, ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ, ಸುಶಿಕ್ಷಿತರಿಗಿಂತ ಅಶಿಕ್ಷಿತರಲ್ಲಿ, ಸಂಪ್ರದಾಯ ಬಲವಾಗಿರುತ್ತದೆ. ಜ್ಞಾನಕ್ಷೇತ್ರಗಳು ವಿಶಾಲವಾದಂತೆಲ್ಲ, ವೈಜ್ಞಾನಿಕ ತಾಂತ್ರಿಕ ಕ್ಷೇತ್ರಗಳಲ್ಲಿ ನೂತನ ಆವಿಷ್ಕಾರಗಳು ಮೊಗದೊರೆದಂತೆ, ಹೊಸ ಮೌಲ್ಯಗಳು ತಲೆಯೆತ್ತಿದಂತೆಲ್ಲ ಹಳೆಯ ಸಂಪ್ರದಾಯಗಳು ಹೋಗಿ ಹೊಸ ಸಾಂಪ್ರದಾಯಗಳು ತಲೆಯೆತ್ತಿದವು.

“ಕೃಷಿ ಆಚರಣೆಗಳನ್ನು ನಡೆಸುವಂತೆ, ಪೈರಿಗೆ ರೋಗ ಬಂದಾಗ ಕೆಲವು ಉಪಾಸನೆಗಳನ್ನು ಅನುಷ್ಠಾನಗೊಳಿಸುತ್ತಾರೆ. ಬೆಂಕಿ ಹಚ್ಚಿ ಬೊಂಬೆಗಳ ಮೂಲಕ, ಮಡಿಕೆಗಳನ್ನು, ಕೀಟಗಳನ್ನು, ದುಷ್ಟ ಶಕ್ತಿಗಳನ್ನು ದೂರವಿರಿಸಲು ಪ್ರಯತ್ನಿಸುತ್ತಾರೆ. ಬೂಸ್ಟ್ ಮತ್ತು ಕರಿ ರೋಗಗಳು ಬಂದಾಗ ಅರಿಶಿಣ ನೀರು ಹಾಕಿ ಎರಚುತ್ತಾರೆ. ಪಡುವಳ, ಕುಂಬಳ, ಸೋರೆಕಾಯಿ, ಇವುಗಳಿಗೆ ಯಾವುದೇ ತೊಂದರೆಯಾಗಬಾರದು. ಹುಲುಸಾಗಿ ಬೆಳೆಯಲಿ ಎಂದು ಸುಣ್ಣ ಬಳಿದ ಮಡಿಕೆಯನ್ನು ಕಟ್ಟುತ್ತಾರೆ. ಸಾವಯವ ಗೊಬ್ಬರದ ಬಳಕೆ ಇತ್ತು. ಆದರೆ ಅತಿಯಾದ ಆಸೆಯಿಂದ, ಹಣ ಸಂಪಾದಿಸಬೇಕೆಂಬ ಬಯಕೆಯಿಂದ ಇಂದಿನ ದಿನಗಳಲ್ಲಿ ಗೊಬ್ಬರಗಳ ಅತಿಯಾದ ಬಳಕೆಯಿಂದ ಇಳುವರಿ ಜಾಸ್ತಿ ಮಾಡುವ ಹಾಗೆ ಮಾಡುತ್ತಾರೆ. ಅದರಿಂದ ಆರೋಗ್ಯವನ್ನು ಹಾಳು ಮಾಡಲು ದಾರಿಯಾಗಿದೆ.”[4]

ಮದುವೆ ಸಾಮಾನ್ಯವಾಗಿ ಅಂದು ಮೂರು ದಿನಗಳ ಕಾಲ ಗಂಡಿನ ಮನೆಯಲ್ಲಿ ನಡೆಯುತ್ತಿತ್ತು. ಶಾಸ್ತ್ರ ಮತ್ತು ಸಂಪ್ರದಾಯಬದ್ಧವಾಗಿ ನಡೆಯುತ್ತಿದ್ದವು. ಆಚರಣೆಗಳು ನಡೆಸುತ್ತಿದ್ದರು. ಹಿರಿಯರ ಸಮ್ಮುಖದಲ್ಲಿ ಮದುವೆಗಳು ಜರಗುತ್ತಿದ್ದವು. ಆದರೆ ಬರಬರುತ್ತಾ ಸಾಂಪ್ರದಾಯಿಕ ಬೆಲೆ ಕಡಿಮೆಯಾಗುತ್ತಾ ಬರುತ್ತಿದೆ. ಒಂದು ದಿನದ ಮದುವೆಗಳು, “ಯಾದಿ ಮ್ಯಾಲ್ ಶಾದಿ” ಉತ್ತರ ಕರ್ನಾಟಕದಲ್ಲಿ ಮದುವೆ ಶೈಲಿಗಳನ್ನು ಪ್ರಾರಂಭಿಸಿದರು. ಜಗತ್ತಿನ ಬಹುತೇಕ ಸಮಾಜಗಳಲ್ಲಿ ಚಾಲ್ತಿಯಲ್ಲಿದೆ. ಪ್ರಾರಂಭದಲ್ಲಿ ಕಟ್ಟುನಿಟ್ಟಾದ ನಿಯಮಗಳಿರಲಿಲ್ಲ. ಸಮಾಜದ ಸ್ವಾಸ್ಥ್ಯಕ್ಕಾಗಿ ಮತ್ತು ಭದ್ರತೆಗಾಗಿ ಕೆಲವು ಕಟ್ಟುಪಾಡುಗಳು ಹುಟ್ಟಿಕೊಂಡಿರಬೇಕು. ನ್ಯಾಯಬದ್ಧವಾಗಿರಲಿಲ್ಲ. ಹೆಣ್ಣಿನ ಕಡೆಯವರು ಕೊಟ್ಟ ವಸ್ತುಗಳನ್ನು ಮರಳಿ ಕೊಟ್ಟರೆ ವಿಚ್ಛೇದನವಾದಂತೆ ಎನ್ನುವ ಇಂತಹ ರೂಢಿಗಳಿವೆ. ಆದರೆ ಇಂದು ಸಾಕಷ್ಟು ಬದಲಾವಣೆ ಹೊಂದಿದೆ. ನ್ಯಾಯಾಲಯದ ಮೂಲಕ ಕಾನೂನಾತ್ಮಕವಾಗಿ ವಿಚ್ಛೇದನವನ್ನು ನೀಡಲಾಗುತ್ತಿದೆ. ಮಾನವ ಕಾಡಿನ ಜೊತೆಗೆ, ಸಸ್ಯಗಳ ಜೊತೆಗೆ ಬದುಕುವ ಹಾಗೆ, ಪ್ರಾಣಿಗಳ ಜೊತೆ ಬದುಕುತ್ತಾ ಬಂದಿದ್ದಾನೆ. ಅವುಗಳ ಜೀವನದ ಅವಿಭಾಜ್ಯ ಅಂಗಗಳಾಗಿ ಪ್ರಾಣಿಗಳನ್ನು ತಮ್ಮಂತೆ ಪ್ರೀತಿವಿಶ್ವಾಸದಿಂದ ಕಾಣುತ್ತಿದ್ದರು. ಅವುಗಳಿಗೆ ರೋಗಗಳಾದರೂ ಬಂದಾಗ ಗಿಡಮೂಲಿಕೆಗಳ ಮೂಲಕ ಅವುಗಳನ್ನು ಉಪಚಾರ ಮಾಡುತ್ತಿದ್ದರು. ಇಂದಿನ ಹಾಗೆ ಇಂಗ್ಲಿಷ್ ಔಷಧಿಗಳ ಬಳಕೆ ಗೊತ್ತಿರಲಿಲ್ಲ. ಔಷಧಿಯಾಗಿ ಗಿಡಮೂಲಿಕೆಗಳನ್ನು

ಹೆಚ್ಚಾಗಿ ಬಳಸುತ್ತಿದ್ದರು. ದೇಶೀಯ ವಸ್ತುಗಳ ಅವಲಂಬಿಕೆಯನ್ನು ಅವರು ಹೆಚ್ಚಾಗಿ ಮಾಡಿದ್ದರು. ಕೈಮಗ್ಗಗಳ ಮೂಲಕ ಬಟ್ಟೆ ನೇಯುವುದನ್ನು ಹಳ್ಳಿಗಳಲ್ಲಿ ಮುಖ್ಯ ಉದ್ಯೋಗವನ್ನಾಗಿಸಿಕೊಂಡಿದ್ದರು. ಗರತಿಯು ಮಗುವನ್ನು ಕುರಿತು,

**"ಆಡಿ ಬಾ ನನ ಕಂದ ಅಂಗಾಲ ತೊಳೆದೇನ**
**ತೆಂಗಿನ ಕಾಯಿ ತಿಳಿನೀರ ತಕೊಂಡು**
**ಬಂಗಾರ ಮೋರೆ ತೊಳದೇನ"[5]**

ಎಂದು ತಾಯಿ ತನ್ನ ಮಗುವನ್ನು ಕುರಿತು ಅವನ ಚಂದವನ್ನು ಕುರಿತು ಹೇಳುತ್ತಾಳೆ. ಆಡಿ ಬಂದ ಮಗುವಿನ ಬಂಗಾರದ ಮೋರ್ಯನ್ನು ತೆಂಗಿನಕಾಯಿ ಎಳನೀರಿನಿಂದ ತೊಳೆಯುತ್ತೇನೆಂದು ಹೇಳುವ ಈ ಮಾತಿನಲ್ಲಿ ಆಡಲು ಹೊರಗೆ ಕಳುಹಿಸುತ್ತಾ ಮಗುವನ್ನು ಆಟ ಆಡಲು ಕಳಿಸುವುದರ ಜೊತೆಗೆ ಪ್ರೀತಿಯಿಂದ ಎತ್ತಿ ಮುದ್ದಾಡುತ್ತಿರುವ ಬಗೆಯನ್ನು ಇವತ್ತಿನ ಬದುಕಿನಲ್ಲಿ ಬಹಳ ವಿರಳವಾಗಿದೆ ಎಂದು ಹೇಳಬಹುದು. ದಿನನಿತ್ಯ ಕೆಲಸಕ್ಕೆ ಹೋಗುವ ತಂದೆತಾಯಿಗಳಿಗೆ ಮಗುವಿನ ಜೊತೆ ಕಾಲ ಕಳೆಯಲು ಸಮಯವೇ ಇಲ್ಲದಾಗಿರುವುದನ್ನು ಕಾಣುತ್ತೇವೆ. ಆಧುನಿಕ ಬದುಕಿನಲ್ಲಿ ಹಣಕ್ಕೆ ಬೆಲೆ ಕೊಟ್ಟಂತೆ ಮಕ್ಕಳು ತಂದೆತಾಯಿಯಿಂದ ದೂರವಾಗುತ್ತಾ ಬರುತ್ತಿದ್ದಾರೆ. ಆಟಗಳಿಗೆ ಮಹತ್ವ ಕೊಟ್ಟಿದ್ದರು. ಮಕ್ಕಳು ಮರಕೋತಿ, ಚಿನ್ನಿದಾಂಡು, ಮುಟ್ಟಾಟಿಕೆ, ಅಂಡಾಳು ಇಂತಹ ಪ್ರಾದೇಶಿಕ ಆಟಗಳನ್ನು ಆಡುತ್ತಾ ಮನರಂಜನೆಯನ್ನು ಪಡೆಯುವ ಮೂಲಕ ಆರೋಗ್ಯವಾಗಿದ್ದರು. ದೈಹಿಕ ಸಮಸ್ಯೆಗಳು ಕಡಿಮೆ ಇದ್ದವು. ಆದರೆ ಆಧುನಿಕತೆಯ ಪ್ರಭಾವದಿಂದ ಕೇವಲ ಮೊಬೈಲ್ ಬಳಕೆ ಮತ್ತು ಗಣಕಯಂತ್ರ ಉಪಯೋಗದಿಂದಾಗಿ ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಾಕಷ್ಟು ರೋಗಗಳಿಗೆ ತುತ್ತಾಗುತ್ತಿರುವುದನ್ನು ಕಾಣುತ್ತೇವೆ. ಆಧುನಿಕ ಸಮಾಜದಲ್ಲಿ ಕೌಟುಂಬಿಕ ಸಂಬಂಧಗಳು ಸಾಕಷ್ಟು ಸಡಿಲಿಸಿವೆ. ಹಾಗಾಗಿಯೇ ಅವಿಭಕ್ತ ಕುಟುಂಬಗಳು ಒಡೆದು ಚೂರುಚೂರಾಗಿವೆ. ಇದರಿಂದ ಸಂಬಂಧಗಳ ಬೆಲೆ ಕಡಿಮೆಯಾಗುತ್ತಿದೆ. ವಿಜ್ಞಾನತಂತ್ರಜ್ಞಾನಗಳು ಆಧುನಿಕತೆಯ ಕೂಸುಗಳು ಎಂಬುದಾಗಿ ಅನೇಕ ವರ್ಷಗಳಿಂದ ನಂಬಿಸಲಾಗಿದೆ.

ಆದರೆ ಇದು ಪರಿಪೂರ್ಣವಲ್ಲ. ವಿಜ್ಞಾನತಂತ್ರಜ್ಞಾನ ಎಂಬ ಪದಪುಂಜಗಳು ಹಾಗೂ ಯಂತ್ರಗಳ ಅಸಾಧ್ಯ ಬೆಳವಣಿಗೆಯನ್ನು ಹೊರತುಪಡಿಸಿದರೆ, ಉಳಿದ ಜ್ಞಾನಧಾರೆಗಳು ಅವುಗಳ ಪ್ರಯೋಗ, ಆಧುನಿಕ ರೂಪಗಳಿಗೆ ಜನಪದ ವಿಜ್ಞಾನತಂತ್ರಜ್ಞಾನಗಳ ತಳಹದಿ ಹಾಗೂ ಬೇರು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಆಧುನಿಕತೆ ಇದನ್ನು ಮರೆಮಾಚಿ ತನ್ನದೇ ಸ್ವಂತ ಸೃಷ್ಟಿ ಈ ವಿಜ್ಞಾನತಂತ್ರಜ್ಞಾನ ಎಂಬುದಾಗಿ ಬಿಂಬಿಸಿದ್ದು ಮಾತ್ರ ಪರಂಪರೆಗೆ ಮಾಡಿದ ಅನ್ಯಾಯ. ಈ ಹಿನ್ನಲೆಯಲ್ಲಿ

ಅಭ್ಯಾಸ ಮಾಡಿದರೆ, ಜಾನಪದರ ಸೃಷ್ಟಿ ಅದ್ಭುತ ವಿಜ್ಞಾನ. ಜಾನಪದರು ಕಲೆಸಂಪ್ರದಾಯ, ನಂಬಿಕೆ, ಆಚರಣೆಗಳನ್ನು ಮಾತ್ರ ಹುಟ್ಟುಹಾಕಿರಲಿಲ್ಲ. ಜೊತೆಗೆ ಆಹಾರ, ಔಷಧಿ ಪದ್ಧತಿಗಳು, ವಸತಿ ನಿರ್ಮಾಣದ ಕುಶಲತೆಗಳು, ಉಡುಪಿನ ಅನ್ವೇಷಣೆ, ಬೇಟೆ, ಆಯುಧಗಳು, ವ್ಯವಸಾಯ ಉಪಕರಣಗಳು, ಅಲಂಕಾರಿಕ ವಸ್ತುಗಳು, ಕುಟ್ಟುವಬಿಸುವ ಉಪಕರಣಗಳು ಮತ್ತು ಪದ್ಧತಿಗಳು, ಜಲಸಂರಕ್ಷಣಾ ಪದ್ಧತಿಗಳು, ಮಕ್ಕಳ ಲಾಲನೆಪಾಲನೆಪೋಷಣೆ, ನ್ಯಾಯ ತೀರ್ಮಾನ, ಕಾನೂನುಗಳು ಮುಂತಾದ ಅನ್ವೇಷಣೆ ನಡೆಸಿ ಬದುಕನ್ನೇ ಪ್ರಗತಿಯತ್ತ ಮುನ್ನಡೆಸಿದ್ದಾರೆ.

ಪ್ರಾಯಶಃ ಜಾನಪದದಷ್ಟು ವಿಶಾಲವೂ, ವ್ಯಾಪಕವೂ ಮತ್ತು ಸರ್ವಾತ್ಮಕವೂ ಆದ ಪದ ಮತ್ತೊಂದಿಲ್ಲ. ಪ್ರಾಚೀನ ಮತ್ತು ಅರ್ವಾಚೀನ ಎರಡರಲ್ಲೂ ಇದೆ. ಆಧುನಿಕ ಕಲೆ, ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನಗಳಲ್ಲಿ ಜಾನಪದ ಹುದುಗಿಕೊಂಡಿರುವುದನ್ನು ಕಾಣುತ್ತೇವೆ. ಆಧುನಿಕ ಮಾನವನ ಮೂಲವನ್ನು ಹುಡುಕುತ್ತಾ ಹೋದಾಗ ದೊರೆಯುವುದು ಪ್ರಾಚೀನ ಹಾಗೂ ಆದಿಮಾನವ. ವೈಜ್ಞಾನಿಕತೆಯ ಮೂಲನೇ ಈ ಜಾನಪದ. ಆಧುನಿಕತೆಯ ಮೂಲ ಬೇರು ಎಂದು ಹೇಳಬಹುದು. ಹಳೆಯದು ಹೊಸತನವನ್ನು ಪಡೆದುಕೊಂಡು ಇಂದು ಆಧುನಿಕವಾಗಿರುತ್ತದೆ. ಆಧುನಿಕವಾಗಿರುವುದೇ ಪ್ರಜ್ಞೆ ಮತ್ತು ನೋಟವನ್ನು ಬದಲಿಸುವ ಕ್ರಮ. ಆಧುನಿಕತೆ ಹಳೆಯ ಪರಂಪರೆ ಇಂದಿನದು ಎನಿಸಿಕೊಂಡು ಆಧುನಿಕತೆ ಎನಿಸಿಕೊಂಡಿದೆ. ಜೀವನ ವಿಧಾನ, ಶೈಲಿ, ಮೌಲ್ಯ, ಚಿಂತನೆ, ಇವೆಲ್ಲವುಗಳ ಬದಲಾವಣೆಯನ್ನು ಆಧುನಿಕವಾಗಿ ಕಾಣುತ್ತೇವೆ. ಆಧುನಿಕತೆಯ ಪ್ರವೇಶ ಸಾಕಷ್ಟು ಬದಲಾವಣೆಗಳಿಗೆ ಕಾರಣವಾಗಿದೆ. ಇದರಿಂದ ಜಾನಪದ ಸಾಹಿತ್ಯ ನಾಶವಾಗುತ್ತಿದೆ. ಜಾನಪದವನ್ನು ಉಳಿಸಿ ಬೆಳೆಸಬೇಕು. ಸಾಧ್ಯವಾದಷ್ಟು ಈ ಬದಲಾವಣೆಯಿಂದ ಜನಪದವನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ.

## ಅಡಿ ಟಿಪ್ಪಣಿಗಳು:

1. ಜವರೇಗೌಡ ದೇ., (2001), ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 02
2. ಅದೇ, ಪು.ಸಂ. 62
3. ಅದೇ, ಪು.ಸಂ. 344
4. ಅದೇ, ಪು.ಸಂ. 349
5. ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, (2008), ಗರತಿಯ ಹಾಡು, ಸಮಾಜ ಪುಸ್ತಕಾಲಯ, ಧಾರವಾಡ, ಪು.ಸಂ. 88

## ಪರಾಮರ್ಶನ ಗ್ರಂಥಗಳು:


1. ಜವರೇಗೌಡ ದೇ., (2001), ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಪರಮಶಿವಯ್ಯ ಜಿ. ಶಂ., (2015), ಜನಪದ ಸಾಹಿತ್ಯ ಸಮೀಕ್ಷೆ, ಕನ್ನಡ ಸಾಹಿತ್ಯ ಪರಿಷತ್ತು.
3. ರಾಮಚಂದ್ರಗೌಡ ಹಿ. ಶಿ., (2010), ಕನ್ನಡ ಜನಪದ ಸಾಹಿತ್ಯ ಪ್ರಕಾರಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, (2008), ಗರತಿಯ ಹಾಡು, ಸಮಾಜ ಪುಸ್ತಕಾಲಯ, ಧಾರವಾಡ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.